# ಚಿಂತಾಮಣಿ

ಯಾವುದನ್ನೇ ಆದರೂ ಮೊದಲ ಸಲ ನೋಡುವಾಗ ನಾವು ನಿಜಕ್ಕೂ ಯಾವುದನ್ನು ನೋಡುವೆವು? ಯಾವುದೋ ದೃಶ್ಯ ಒಂದನ್ನು ನೋಡುವೆವು ಎನ್ನುವುದೇನೋ ನಿಜ. ಆದರೆ ಆ ದೃಶ್ಯವನ್ನು ಮಾತ್ರ ನೋಡುವೆವೆ? ಅಥವಾ ಆ ದೃಶ್ಯದ ಜೊತೆಗೆ ಅದರ 'ಹೋಲಿಕೆ'ಯನ್ನೂ ನೋಡುವೆವೆ? ಅಂದರೆ– ದೃಶ್ಯವನ್ನು ನೋಡುವಾಗ ಹೋಲಿಸುವ ಕಲ್ಪನೆ ಇಲ್ಲದೆ ಸಹಜ ನೋಡುವೆವೆ? ಅಥವಾ ಹೋಲಿಸುವ ಕಲ್ಪನೆಯ ಜತೆಗೇ ನೋಡುವೆವೆ? ನಾವು ನೋಡುವ ಕ್ರಿಯೆಯಲ್ಲಿಯೇ ಒಂದನ್ನು ಇನ್ನೊಂದರೊಡನೆ ಹೋಲಿಸುವ ಕಲ್ಪನೆಯು ನಮಗೆ ಗೊತ್ತಿಲ್ಲದಂತೆ ಮಿಳಿತವಾಗಿ ಇರುತ್ತದೆಯೇ? ಮೊದಲ ಸಲ ನೋಡುವಾಗ– ಮಗುವಿನ ಮುಗ್ದ ಕಣ್ಣುಗಳಿಂದ ನೋಡುವಾಗ– ಆ ನೋಟದಲ್ಲಿ, ತಾನು ನೋಡಿದ್ದನ್ನು ಇನ್ನೊಂದರ ಜೊತೆ ಹೋಲಿಸುವ ಕಲ್ಪನೆಯೇ ಇರಲಾರದು ಎನಿಸುತ್ತದೆ.ಈ ನಿಲುವೆ ಹೆಚ್ಚು ತರ್ಕಬದ್ಧವಾದುದು ಎನಿಸುತ್ತದೆ . ನಿಜ. ಆದರೆ ನೋಡಿದ ದೃಶ್ಯದ 'ನೆನಪು'– ಮನಸ್ಸಿನಲ್ಲಿ ಉಂಟಾಗುತ್ತದಲ್ಲ! ಉಂಟಾಗಿ 'ನೆನಪು' ಉಳಿದಿರುತ್ತದಲ್ಲ! ಹಾಗೆ 'ನೆನಪು 'ಉಳಿದಿರುವುದರಿಂದ ಆಮೇಲಿನ ನೋಟಗಳಲ್ಲೆಲ್ಲ ತಾನು ಮೊದಲು ನೋಡಿದ್ದರ ಜೊತೆಗೆ ಒಂದು 'ಹೋಲಿಕೆ' ಉಂಟಾಗುವುದು ಸಹಜವೇ. ಇನ್ನೊಂದು ರೀತಿ ಹೇಳುವುದಾದರೆ– ನಾವು ನೋಡಿದ ಮೊದಲ ನೋಟವೇ ನಮ್ಮಲ್ಲಿ ನೆನಪಾಗಿ ನೆಲೆಸಿ, ತನ್ನನ್ನು ಇನ್ನೊಂದರ ಜೊತೆ ಹೋಲಿಸಿ ನೋಡು, ತೂಗಿ ನೋಡು, ಬೆಲೆ ಕಟ್ಟು ಎಂದು ಪ್ರೇರಿಸುತ್ತಿರುವಂತಿದೆ! ಸೂಕ್ಷ್ಮವಾಗಿ ನೋಡಿದರೆ –ನೆನಪೆಂದರೆ ಏನು? ನಿಜವಾಗಿ ನಡೆದ ಘಟನೆಯೊಂದರ ಮಾನಸಿಕ ನಕಾಶೆಯಲ್ಲವೇ? ಘಟನೆಯೂ ಅದರ ನಕಾಶೆ ಪರಸ್ಪರ ಹೋಲಿಲೇಬೇಕಲ್ಲವೇ? ನೆನಪು ನಿಜದ ನೆರಳಲ್ಲ.ನಿಜದ ಜೀವಂತವಾದ ನಕಾಶೆ ಯಾಗಿದೆ! ನಾವು ಬದುಕಿನಲ್ಲಿ ಮೊದಲು ನಕಾಶೆಯನ್ನು ಸಿದ್ಧಗೊಳಿಸಿ ಆಮೇಲೆ ಅದರಂತೆ ಕಾರ್ಯಗತಗೊಳಿಸುವೆ. ಪ್ರಕೃತಿಯಲ್ಲಿ ಮೊದಲು ಅನುಭವ; ಆಮೇಲೆ ಅದರ ಮಾನಸಿಕ ನಕಾಶೆ. ಅಥವಾ ಅನುಭವದ ಜತೆಜತೆಗೆ ಅದರ ನಕಾಶೆಯೂ ಮಾನಸಿಕವಾಗಿ ಏರ್ಪಡುತ್ತಾ ಹೋಗುವುದು . ಆದುದರಿಂದ 'ಹೋಲಿಕೆ' ಎನ್ನುವುದು ನಮ್ಮೆಲ್ಲಾ ಅನುಭವಗಳಿಗೂ ಅನಿವಾರ್ಯವಾದ ಛಾಯಾ ಶರೀರವಾಗಿ ಇರುತ್ತದೆ ಎನ್ನಬಹುದು. ನೆನಪು–ಹೋಲಿಕೆ ಇವೆರಡೂ ಒಂದೇ ಎಂದು ಕೂಡ ಹೇಳಬಹುದು.

ಅನುಭವವು ಉತ್ಕಟವಾದಷ್ಟು ಅದರ ನೆನಪು ಉತ್ಕಟವಾಗಿ ಇರುತ್ತದೆ. ಮೊದಲ ನೋಟದ ಅನುಭವವು ಉತ್ಕಟದಲ್ಲವೇ? ಉತ್ಕಟವಾಗಿ ನೋಡಿದ್ದು ಎಂದರೆ ಏನು? ತನ್ನನ್ನು ತಾನು ಮರೆತಂತೆ ನೋಡಿದ್ದಲ್ಲವೇ? ಬೇರೆಲ್ಲವನ್ನೂ ಮರೆತು ತಾನು ನೋಡಿದರಲ್ಲಿ ತನ್ನನ್ನೇ ಒಪ್ಪಿಕೊಂಡಂತೆ ನೋಡಿದ ನೋಟ. ಮಗುವಿನ ಮುಗ್ಧವಾದ ನೋಟವು ಹೌದು. ಮುಗ್ಧವಾದ ನೋಟವೆಂದರೆ ನಿಷ್ಕಳಂಕ ನೋಟ. ತಾನು ನೋಡಿದ್ದನ್ನು ಸ್ವಾರ್ಥಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬ ಯೋಚನೆಯೇ ಇಲ್ಲದೆ ನೋಡಿದ ನೋಟ. ತಾದಾತ್ಮ್ಯದ ನೋಟ. ಆದುದರಿಂದಲೇ ಈ ಅನುಭವ ಉತ್ಕಟ. ಹೌದು. ತನ್ನನ್ನು ಮರೆತು ನೋಡಿದ ನೋಟದ ನೆನಪು ಗಾಢವಾಗಿ ಉಳಿದುಕೊಳ್ಳುತ್ತದೆ! ಇದೊಂದು ಆಶ್ಚರ್ಯ! ತನ್ನನ್ನು ಮರೆತ ನೆನಪು. ತನ್ನನ್ನೇ ಮರೆತುದರ ನೆನಪು! ಈ ನೆನಪು ಉಳಿದೆಲ್ಲ ನೆನಪುಗಳಿಗಿಂತಲೂ ಜೀವಂತ ಮತ್ತು ಗಾಢ. ಸ್ಥೂಲವಾಗಿ – ನಾವು 'ಬಾಲ್ಯಕಾಲದ ನೆನಪು 'ಎನ್ನುತ್ತೇವಲ್ಲ– ಸಾಹಿತ್ಯವು ಸೇರಿದಂತೆ ಎಲ್ಲ ಬಗೆಯ ಸೃಷ್ಟಿಶೀಲ ಕ್ರಿಯೆ ಗಳಿಗೆಮೂಲ ಪ್ರೇರಣೆಯಂತೆ ಇರುವ ಬಾಲ್ಯದ ನೆನಪು ಇದು. ತನ್ನನ್ನು ತಾನು ಬರೆದಂತಹ ಅನುಭವವನ್ನು ಸೃಷ್ಟಿಸು ಎಂದು ಕಾಡುತ್ತಿರುವ ನೆನಪು. ಬದುಕಿನಲ್ಲಿ ಆಮೇಲೆ ನಾವು ಗೊತ್ತಿದ್ದೋ ಗೊತ್ತಿಲ್ಲದೆಯೋ ಅನಿವಾರ್ಯವಾಗಿ ಬೆಳೆಸಿಕೊಂಡ 'ಅಸಾಧಾರಣ' ವ್ಯಕ್ತಿತ್ವದ ಭಾರವನ್ನು ಕಳೆದುಕೊಂಡು ವ್ಯಕ್ತಿತ್ವವು ಸಾಧಾರಣೀಕರಣಗೊಂಡು ನಿರಾಳವಾಗುವುದಕ್ಕಾಗಿ ಒತ್ತಾಯಿಸುವ ನೆನಪು.

ಒಳಗಿನ ನೆನಪು ಗಾಢವಾಗಿದೆ ನಿಜ ಆದರೆ ಅದನ್ನು ಮೂಲೆಗುಂಪಾಗಿಸುವಂತೆ ಇರುವ ಬದುಕಿನ ನಿತ್ಯ ವ್ಯವಹಾರದ ಜಂಜಡದ ಭಾರವೇನೂ ನಿಭಾಯಿಸಲು ಸುಲಭವಾದುದಲ್ಲ. ಇದನ್ನು ಎಲ್ಲರೂ ಬಲ್ಲರು. ಆದುದರಿಂದಲೇ ಒಳಗಿನ ನೆನಪನ್ನು, ಮತ್ತೆ ಬೆಳಗಬಲ್ಲ ,ಉದ್ಬುದ್ಧ ಗಳಿಸಬಲ್ಲ ಜೀವಂತ ಕ್ಷಣಗಳಿಗಾಗಿ, ಒಂದು ಹೋಲಿಕೆಗಾಗಿ– ತಮಗೆ ಗೊತ್ತಿಲ್ಲದೇ ಎಲ್ಲರೂ ಕಾಯುತ್ತಿರುವಂತಿದೆ. ಅದು ಎಲ್ಲಿ, ಯಾವಾಗ, ಯಾವ ಸಂದರ್ಭದಲ್ಲಿ, ಯಾವ ವಯಸ್ಸಿನಲ್ಲಿ , ಯಾರ, ಯಾವುದರ ಮೂಲಕ ಉದ್ಬುದ್ಧ ಆಗಬಹುದೆಂದು ಯಾರೂ ಹೇಳಲಾರರು. ಅಂದರೆ ಅದನ್ನು ವ್ಯವಸ್ಥಿತಗೊಳಿಸಲಾಗುವುದಿಲ್ಲ. ಅದೇ ಅದರ ಜೀವಂತಿಕೆ. ಅದು ಕಾಡಿನ ಏಕಾಂತದಲ್ಲಿ ಏಕಾಂತದಲ್ಲೂ ಆಗಬಹುದು. ಊರ ನಡುವೆಯೂ– ಸಂತೆ ಗದ್ದಲದಲ್ಲೂ ಆಗಬಹುದು ಇಂಥ ಅಪೂರ್ವ ಅನುಭವವೊಂದನ್ನು ಅಕ್ಕಮಹಾದೇವಿ 'ಊರ ನಡುವೆ ಒಂದು ಬೇಂಟೆ ಬಿದ್ದಿತ್ತು – ಆರು ಕಂಡವರು ತೋರಿರಯ್ಯ' ಎಂದು ಬೇಟೆಯ ರೂಪಕದ ಮೂಲಕ ಹೇಳುತ್ತಾಳೆ. ಈ ವಚನ ಅದ್ಭುತವಾಗಿದೆ.

ಗೋಪಾಲಕೃಷ್ಣ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ 'ಇಂಥದೇ ರೋಮಾಂಚನದ ಅನುಭವವೊಂದನ್ನು ಹೇಳುವ ಅಪೂರ್ವವಾದ ಕವನ.

'ಚಿಂತಾಮಣಿ' ಎಂಬ ಊರು. 'ಊರ ನಡುವೆ' ಅಲ್ಲಿನ ಸಭಾಂಗಣದಲ್ಲಿ ಕವಿ ಭಾಷಣದಲ್ಲಿ ತೊಡಗಿದ್ದಾರೆ. ತೊಡಗಿದ್ದಾರೆ ನಿಜ ಆದರೆ ಶೇಕಡಾ ಹತ್ತು ಪಾಲು ಕವಿ ಮನಸ್ಸು– ಅನ್ಯಮನಸ್ಕವಾಗಿದೆ. ಅನ್ಯಮನಸ್ಕತೆ ಹೆಚ್ಚು ಜೀವಂತ. ಅನ್ಯಮನಸ್ಕ ಆದುದರಿಂದಲೇ ಕವಿಯ ಕಣ್ಣು ಸಭೆಯಲ್ಲಿ ಅದೇನನ್ನೋ ಹುಡುಕುತ್ತಿದೆ. ಕಣ್ಣಿನ ಹುಡುಕಾಟವೆಂದ ಮೇಲೆ– ಲಂಪಟವಲ್ಲದಿದ್ದರೂ – ಅಲ್ಲೊಂದು 'ಅಂತರಂಗದ ಅನಂಗ ಭಂಗಿ' ಇದೆ. 'ಅನಂಗ'ನೆಂದರೆ 'ಕಾಮ' ಹೌದಾದರೂ 'ಅನಂಗ ಭಂಗಿಯು' ಸಾಂಗವಾಗಿಲ್ಲ ಎಂದು ಸೂಚಿಸುತ್ತಾ ಅಲ್ಲೂ ಅನ್ಯಮನಸ್ಕತೆಯನ್ನು ಹೇಳುವುದು! ನೋಟಗಳ ಈ ಕಾಯುವಿಕೆಯ ನಡುವೆ ಇದ್ದಕ್ಕಿದ್ದಂತೆ ಏನಾಯಿತೆಂದರೆ–

'ಹಠಾತ್ತಾಗಿ ಮೂಡಿತ್ತಲ್ಲಿ ಅಗೋ, ಅಗೋ ಸಭಾ ಮಧ್ಯದಲ್ಲಿ ಪರಮಾಪ್ತ ಮುಖ, ಮಾತಿನಾಚೆಯ ಸಹಸ್ಪಂದಿ, ಮಾತಿಲ್ಲದೆಯೇ ಇಂಗಿತವನರಿವ ಸಹಭಾಗಿನಿಯ ಸಹಜ ಮುದ್ರೆ' – ಕವಿ ಯಾವುದನ್ನು ಹುಡುಕುತ್ತಿದ್ದಾರೋ ಗೊತ್ತಿಲ್ಲ. ಆದರೆ ತಾನಾಗಿ ಮೂಡಿಬಂದ ಈ ಸ್ತ್ರೀ ಮುಖವನ್ನು ಕಂಡ ಕ್ಷಣದಲ್ಲಿ ತಾನು ಇದನ್ನೇ ಹುಡುಕುತ್ತಿದ್ದುದು ಎಂದು ಕವಿಗೆ ಅರಿವಾಗಿ ಬಿಟ್ಟಿದೆ! 'ಪಡೆದುದನ್ನೇ ಬಯಸಿದಂತೆ ಇತ್ತು' ಎಂದು ಅಂಬಿಕಾತನಯದತ್ತರು ಹೇಳಿದಂತೆ ಇದು ಪರಮಾಪ್ತ ಮುಖ! ಈ ಮುಖ ಉಂಟುಮಾಡುವ ಆಪ್ತ ಸನ್ನಿವೇಶದಲ್ಲಿ ಮಾತು ಬೇಕಿಲ್ಲ . ಎಲ್ಲೂ ಯಾವ ಕೃತಕತೆಯೂ ಇಲ್ಲ' ಸಹಭಾಗಿನಿಯ ಸಹಜ ಮುದ್ರೆ' ಎಲ್ಲೆಲ್ಲೂ. ಮಾತು ಅಪ್ರಯತ್ನವಾಗಿ ಹೊಸ ಅರ್ಥಗಳನ್ನು ಚಿಮ್ಮಿಸುವಂತೆ ಇದೆ ಈ ಸಂದರ್ಭ ಅಥವಾ ಅರ್ಥಗಳೇ ಮಾತಿನ ಮೈಯ್ಯನ್ನು ಹೊಕ್ಕಂತೆ. ಇದೊಂದು ವಾಗರ್ಥಗಳ ಅನಾದಿ ಪ್ರಣಯವೂ ಹೌದು . ಇದೊಂದು ಬೆರಗಿನ ಸಂದರ್ಭ ಎನ್ನುತ್ತಿದ್ದಾರೆ ಕವಿ. 'ಮಿಂಚಂತೆ ಬಂದೊಂದು ಬೆರಗು' ಮೂರ್ತ, ಅಮೂರ್ತ ಗಳೆರಡೂ ಸಹಜ ಬೆರೆತು ಅನುಭವವಾಗುತ್ತಿರುವ ಕ್ಷಣವಿದು ಎನ್ನುತ್ತಿದ್ದಾರೆ. 'ಕಣ್ಣಂಚಲ್ಲಿ ಚಕಮಕಿಸುತ್ತಿರುವ ಬೆಳಕಿನ ಗುಳ್ಳೆ' ಎನ್ನುತ್ತಾರೆ. 'ಮುಂಗೈ ಮೇಲೆಯೇ ಅಮೂರ್ತ ಕುಳಿತ ಅರಗಿಣಿ' ಎನ್ನುತ್ತಾರೆ. 'ಕನ್ನೆಯಲ್ಲ ವತರಿಸುವ ಅನಾದಿ ರಾಗದ ಪ್ರತಿಮೆ' ಎನ್ನುತ್ತಾರೆ .

ನಿಜ ಇದು ಅಪೂರ್ವ ಅನುಭವ .ಆದರೂ ಕವಿ ಕೇಳದಿರುವಂತಿಲ್ಲ.

ಪೂರ್ವದಲ್ಲಿ – ಹಿಂದೆ – ಈ ಅನುಭವ ಆಗಿತ್ತೆ? ಈ ಮುಖವನ್ನು ಹಿಂದೆ ಎಂದಾದರೂ ಕಂಡಿದ್ದೆನೆ?

'ಎಲ್ಲಿ ಯಾವಾಗ ಯಾವ ಭವದಲ್ಲಿ, ಲೋಕದಲ್ಲಿ, ಸಂಭಾವ್ಯತೆಯ ಯಾವ ಆಕಸ್ಮಿಕದ ಆತ್ಮೀಯತೆಯ ಆಪ್ಯಾಯಮಾನ ಕ್ಷಣದಲ್ಲಿ ಕಂಡದ್ದು ಅದು?'

ಅಪೂರ್ವವಾದೊಂದು ಅನುಭವವೂ, ತನ್ನಲ್ಲೇ ತಾನು ಸ್ಥಗಿತಗೊಳ್ಳದೆ– ಹಿಂದು ಮುಂದಿನದನ್ನು ಒಳಗೊಳ್ಳುವಂತೆ, ನೆನಪನ್ನು ಉದ್ಬುದ್ಧಗೊಳಿಸುವ ಚಿಂತಾಮಣಿಯಾಗಿದೆ.

■ ತೋಷ

## ಮಾತೇ ಮುತ್ತು

★ ಯಾವುದಾದರೂ ವಿಚಾರವನ್ನು ಒಪ್ಪಿಕೊಳ್ಳದೆ, ಮನಸ್ಸಿಗೆ ಬಿಟ್ಟುಕೊಂಡರೆ ನಿಮ್ಮದು ಶಿಕ್ಷಿತ ಮನಸ್ಸು ಎನ್ನಬಹುದು.

–ಅರಿಸ್ಟಾಟಲ್

★ ಶಾಲೆಯ ಬಾಗಿಲನ್ನು ತೆರೆಯುವಾತ ಜೈಲಿನ ಬಾಗಿಲು ಮುಚ್ಚಿದಂತೆ.

–ವಿಕ್ಟರ್ ಹ್ಯೂಗೊ

★ ಅತ್ಯುತ್ತಮ ಕಲಿಕೆಯ ತರಗತಿ ಹಿರಿಯರ ಪದತಲದಲ್ಲಿದೆ.

–ಆಂಡಿ ರೂನಿ